# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | 233 (2169) |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಪಿ.ಹೆಚ್.ಪೂಜಾರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| **ಉತ್ತರಿಸುವ ದಿನಾಂಕ** | : | 26-03-2026 |
| **ಉತ್ತರಿಸುವ ಸಚಿವರು** | : | ಕಾನೂನು, ನ್ಯಾಯ, ಮಾನವ ಹಕ್ಕುಗಳು,<br>ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ<br>ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಪ್ರವಾಸೋದ್ಯಮ ನೀತಿ 2025-29ರ ಆದೇಶದಲ್ಲಿ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಎಷ್ಟು ಪ್ರವಾಸಿ ಸ್ಥಳಗಳನ್ನು ಗುರುತಿಸಲಾಗಿದೆ; (ಪ್ರವಾಸಿ ತಾಣಗಳ ಹೆಸರಿನೊಂದಿಗೆ ಜಿಲ್ಲಾವಾರು ಹಾಗೂ ತಾಲ್ಲೂಕುವಾರು ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಟಿಒಆರ್/194/ಟಿಡಿಒ/2025, ದಿನಾಂಕ 07.08.2025 ರಲ್ಲಿ ಕರ್ನಾಟಕ ಪ್ರವಾಸೋದ್ಯಮ ನೀತಿ 2024-29 ರಡಿ ಬಾಗಲಕೋಟೆ ಜಿಲ್ಲೆಯಲ್ಲಿ 28 ಹಾಗೂ ವಿಜಯಪುರ ಜಿಲ್ಲೆಯಲ್ಲಿ 33 ಪ್ರವಾಸಿ ತಾಣಗಳನ್ನು ಗುರುತಿಸಲಾಗಿರುತ್ತದೆ. ಸದರಿ ಪ್ರವಾಸಿ ತಾಣಗಳ ತಾಲ್ಲೂಕುವಾರು ಪಟ್ಟಿಯನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |
| ಆ) | ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ವಿಪುಲ ಅವಕಾಶಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪ್ರವಾಸೋದ್ಯಮ ವನ್ನು ಬಲಪಡಿಸಲು ಹಾಗೂ ಪ್ರವಾಸಿಗರನ್ನು ಸೆಳೆಯಲು ಸರ್ಕಾರ ಹಾಕಿಕೊಂಡಿರುವ ಯೋಜನೆಗಳು ಹಾಗೂ ರೂಪುರೇಷೆಗಳು ಯಾವುವು; (ಜಿಲ್ಲಾವಾರು ಪ್ರತ್ಯೇಕವಾಗಿ ಮಾಹಿತಿ ನೀಡುವುದು) | ಬಂದಿದೆ.<br><br>ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ರಾಜ್ಯದ ಪ್ರವಾಸೋದ್ಯಮವನ್ನು ಬಲಪಡಿಸಲು ಹಾಗೂ ಪ್ರವಾಸಿಗರನ್ನು ಸೆಳೆಯಲು ಸರ್ಕಾರ ಹಾಕಿಕೊಂಡಿರುವ ಯೋಜನೆಗಳು ಹಾಗೂ ರೂಪುರೇಷೆಗಳ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| ಇ) | ಆದೇಶದಲ್ಲಿ ಈಗಾಗಲೇ ಪ್ರಸಿದ್ಧ ಪಡೆದಿರುವ ಹಲವು ಪ್ರವಾಸಿ ಸ್ಥಳಗಳು ಬಿಟ್ಟುಹೋಗಿದ್ದು, ಅಂತಹ ಪ್ರವಾಸಿ ತಾಣಗಳನ್ನು ಮತ್ತೆ ಸೇರಿಸಿ ಆದೇಶ ಹೊರಡಿಸಲು ಜಿಲ್ಲೆಯ ಭಕ್ತರ ಮತ್ತು ಪ್ರವಾಸಿಗರ ಒತ್ತಾಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅವುಗಳನ್ನು ಸೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; (ಜಿಲ್ಲಾವಾರು, ತಾಲ್ಲೂಕುವಾರು, ಗ್ರಾಮವಾರು ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಟಿಒಆರ್/194/ಟಿಡಿಒ/2025, ದಿನಾಂಕ:07.08.2025 ರಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ 28 ಹಾಗೂ ವಿಜಯಪುರ ಜಿಲ್ಲೆಯಲ್ಲಿ 33 ಪ್ರವಾಸಿ ತಾಣಗಳನ್ನು ಗುರುತಿಸಲಾಗಿರುತ್ತದೆ.<br><br>ಈಗಾಗಲೇ ಗುರುತಿಸಿರುವ ಪ್ರವಾಸಿ ತಾಣಗಳ ಪಟ್ಟಿಯಲ್ಲಿ ಬಿಟ್ಟುಹೋಗಿರುವ ಪ್ರವಾಸಿ ತಾಣಗಳ ಕುರಿತು ಬಾಗಲಕೋಟೆ ಜಿಲ್ಲೆಯಿಂದ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.<br><br>ಮಾನ್ಯ ಶಾಸಕರು, ದೇವರಹಿಪ್ಪರಗಿ ವಿಧಾನ ಸಭಾ ಮತಕ್ಷೇತ್ರ ರವರ ಕೋರಿಕೆಯಂತೆ ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿ ತಾಲ್ಲೂಕಿನ ಕೋರವಾರ ಗ್ರಾಮದ ಶ್ರೀ ಹನುಮಾನ ದೇವಸ್ಥಾನ ವನ್ನು ಹೆಚ್ಚುವರಿ ಪ್ರವಾಸಿ ತಾಣವಾಗಿ ಗುರುತಿಸಲು ಪ್ರಸ್ತಾವನೆ ಸ್ವೀಕೃತವಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.<br><br>ಮಾನ್ಯ ಶಾಸಕರು, ಮುದ್ದೇಬಿಹಾಳ ಮತಕ್ಷೇತ್ರ ಇವರ ಕೋರಿಕೆಯನ್ವಯ ಮುದ್ದೇಬಿಹಾಳ ಮತಕ್ಷೇತ್ರದ ಈ ಕೆಳಕಂಡ ತಾಣಗಳನ್ನು ಪ್ರವಾಸಿ ತಾಣಗಳ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲು ದಿನಾಂಕ:02-03-2026ರಲ್ಲಿ ಪ್ರಸ್ತಾವನೆ ಸ್ವೀಕೃತವಾಗಿದ್ದು, ಆಯುಕ್ತಾಲಯದಲ್ಲಿ ಪರಿಶೀಲನೆಯಲ್ಲಿದೆ.<br>1. ತಾಳಿಕೋಟೆ ತಾಲ್ಲೂಕಿನ ಹಿರೂರ ಗ್ರಾಮದ ಶ್ರೀ ಭೋಗೇಶ್ವರ ದೇವಸ್ಥಾನ.<br>2. ಮುದ್ದೇಬಿಹಾಳ ತಾಲ್ಲೂಕಿನ ಅಯ್ಯನಗುಡಿ ಗ್ರಾಮದ ಶ್ರೀ ಗಂಗಾಧರೇಶ್ವರ ದೇವಸ್ಥಾನ. |

.........2

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | 3. ಮುದ್ದೇಬಿಹಾಳ ತಾಲ್ಲೂಕಿನ ಹಡಲಗೇರಿ ಗ್ರಾಮದ ಶ್ರೀ ಪದ್ಮಾವತಿ ದೇವಿ ಹಾಗೂ ಶ್ರೀ 1008 ಪಾರ್ಶ್ವನಾಥ ತೀರ್ಥಂಕರರ ದಿಗಂಬರ ಜೈನ ಬಸದಿ.<br>4. ಮುದ್ದೇಬಿಹಾಳ ತಾಲ್ಲೂಕಿನ ಕುಂಟೋಜಿ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನ. |
| ಈ) | ಕಳೆದ 3 ವರ್ಷದಿಂದ ಸದರಿ ಜಿಲ್ಲೆಯಲ್ಲಿನ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಸರ್ಕಾರ ಮಂಜೂರು ಮಾಡಿರುವ ಮತ್ತು ಬಿಡುಗಡೆ ಮಾಡಿರುವ ಅನುದಾನ ಎಷ್ಟು; ಸರ್ಕಾರ ಕೈಗೊಂಡಿರುವ ಕಾಮಗಾರಿಗಳು ಯಾವುವು; (ವಿವರಿಸುವುದು) | ಕಳೆದ 3 ವರ್ಷದಿಂದ ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಯಲ್ಲಿನ ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ ಕೈಗೊಂಡಿರುವ ಮೂಲ ಸೌಲಭ್ಯ, ಸಂರಕ್ಷಣೆ ಹಾಗೂ ಪುನರುಜ್ಜೀವನ ಕಾಮಗಾರಿಗಳ ವಿವರ ಹಾಗೂ ಅವುಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಲಾಗಿರುತ್ತದೆ. |
| ಉ) | ಪ್ರವಾಸಿಗರಿಗೆ ಸುಸಜ್ಜಿತ ವಸತಿ ವ್ಯವಸ್ಥೆ, ಪಾರ್ಕಿಂಗ್ ವ್ಯವಸ್ಥೆ, ರಸ್ತೆ ವ್ಯವಸ್ಥೆಗಳಂತಹ ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಪ್ರವಾಸಿಗರು ಭೇಟಿ ನೀಡುತ್ತಿರುವ ಸಂಖ್ಯೆ ಕಡಿಮೆಯಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಈ ನಿಟ್ಟಿನಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳ ಪ್ರವಾಸಿ ತಾಣಗಳಲ್ಲಿನ ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಕಡಿಮೆಯಾಗುತ್ತಿರುವ ವಿಷಯ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ.<br><br>ಆದರೆ, ಈಗಾಗಲೇ ರಾಜ್ಯದ ಪ್ರವಾಸಿ ತಾಣಗಳ ಬಳಿ ಇಲಾಖೆಗೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಲಭ್ಯತೆಗನುಗುಣವಾಗಿ ಪ್ರವಾಸಿ ಮೂಲ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.<br><br>ಇದಲ್ಲದೇ, ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಗಳನ್ನು ಒಳಗೊಂಡಂತೆ ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಜಾರಿಗೆ ತಂದಿರುವ ಕರ್ನಾಟಕ ಪ್ರವಾಸೋದ್ಯಮ ನೀತಿ 2024-29 ಅಡಿ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಮುಂದೆ ಬರುವ ಖಾಸಗಿ ಹೂಡಿಕೆದಾರರನ್ನು ಪ್ರೋತ್ಸಾಹಿಸಲು 25 ಪ್ರವಾಸಿ ಉತ್ಪನ್ನಗಳನ್ನು ಗುರುತಿಸಲಾಗಿದೆ. ಈ ಉತ್ಪನ್ನಗಳಲ್ಲಿನ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಅಗತ್ಯ ಹೂಡಿಕೆ ಮಾಡಲು ಇಚ್ಛಿಸುವ ಖಾಸಗಿ ಉದ್ಯಮದಾರರಿಗೆ ನಿಯಮಾನುಸಾರ ಸಹಾಯಧನ, ರಿಯಾಯಿತಿ ಹಾಗೂ ಪ್ರೋತ್ಸಾಹಕಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಮುಂದುವರೆದು, ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಗಳನ್ನು ಒಳಗೊಂಡಂತೆ ಕಿತ್ತೂರು ಕರ್ನಾಟಕ ಭಾಗದಲ್ಲಿ ಬರುವ ಜಿಲ್ಲೆಗಳಲ್ಲಿ ಹೂಡಿಕೆ ಮಾಡಲು ಮುಂದೆ ಬರುವ ಖಾಸಗಿ ಹೂಡಿಕೆದಾರರಿಗೆ ಶೇ.5 ರಷ್ಟು ಹೆಚ್ಚುವರಿ ಸಹಾಯಧನವನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ. |

**TOR 124 TDV 2026**

**(ಎಚ್.ಕೆ. ಪಾಟೀಲ)**
ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು.

# ಅನುಬಂಧ-1
# ನೂತನ ಪ್ರವಾಸಿ ತಾಣಗಳ ವಿವರ

| ಕ್ರ.ಸಂ. | ತಾಲ್ಲೂಕಿನ ಹೆಸರು | ಪ್ರವಾಸಿ ತಾಣದ ಹೆಸರು |
|---|---|---|
| | **ಬಾಗಲಕೋಟೆ ಜಿಲ್ಲೆ** | |
| 1 | ಬಾಗಲಕೋಟೆ | ಮುಚಖಂಡಿ ಕೆರೆ, |
| 2 | | ಸಿಮಿಕೇರಿ-ಲಡ್ಡುಮುತ್ಯಾ. |
| 3 | | ತುಳಸಿಗೇರಿ |
| 4 | | ಕಲಾದಗಿ |
| 5 | | ಹಳ್ಳೂರು |
| 6 | | ಶಿರೂರು |
| 7 | ಹುನಗುಂದ | ಐಹೊಳೆ |
| 8 | | ಕೂಡಲಸಂಗಮ |
| 9 | | ಸಿದ್ದನಕೊಳ್ಳ |
| 10 | ಬಾದಾಮಿ, | ಬಾದಾಮಿ, |
| 11 | | ಬನಶಂಕರಿ |
| 12 | | ಶಿವಯೋಗ ಮಂದಿರ |
| 13 | | ಪಟ್ಟದಕಲ್ಲು. |
| 14 | | ಮಹಾಕೂಟ |
| 15 | | ಹುಲಿಗೆಮ್ಮನಕೊಳ್ಳ |
| 16 | ಬೀಳಗಿ | ಚಿಕ್ಕಸಂಗಮ |
| 17 | | ಕಪ್ಪರಪಡಿಯಮ್ಮ |
| 18 | | ಹೆರಕಲ್ |
| 19 | | ಯಡಹಳ್ಳಿ ಚಿಂಕಾರ ವನ್ಯಜೀವಿಧಾಮ |
| 20 | ಜಮಖಂಡಿ | ಕಟ್ಟಿಕೆರೆ |
| 21 | | ಜಮಖಂಡಿ |
| 22 | | ಶೂರ್ಪಾಲಿ |
| 23 | ಮುಧೋಳ | ರನ್ನಬೆಳಗಲಿ |
| 24 | | ಮಂಟೂರು |
| 25 | ರಬಕವಿ ಬನಹಟ್ಟಿ | ಮಹಾಲಿಂಗಪೂರ |
| 26 | | ತೇರದಾಳ |
| 27 | ಗುಳೇದಗುಡ್ಡ | ದಿಡಗ್ (ಗುಳೇದಗುಡ್ಡ) ಜಲಪಾತ್ |
| 28 | ಇಲಕಲ್ | ದಮ್ಮೂರು ಜಲಪಾತ |
| | **ವಿಜಯಪುರ ಜಿಲ್ಲೆ** | |
| 1 | ವಿಜಯಪುರ | ಗೋಲಗುಮ್ಮಟ, ವಿಜಯಪುರ ನಗರ |
| 2 | | ಇಬ್ರಾಹಿಂ ರೋಜಾ ವಿಜಯಪುರ ನಗರ - |
| 3 | | ಶ್ರೀ ವಾಗ್ದೇವಿ ದೇವಸ್ಥಾನ ದ್ಯಾಬೇರಿ ಗ್ರಾಮ |
| 4 | | ಬೇಸಿಗೆ ಅರಮನೆ -ಕುಮಟಗಿ ಗ್ರಾಮ |
| 5 | | ಸಾರಿಪುತ್ರ ಬೊಧಿದಮ್ಮ ಬೌದ್ಧ ವಿಹಾರ |
| 6 | | ಶ್ರೀ ಗುರು ಚಕ್ರವರ್ತಿ ಸದಾಶಿವ ಶಿವಯೋಗಿ ಮಠ ಸಾ ಕತ್ನಳ್ಳಿ /ಕತಕನಹಳ್ಳಿ |
| 7 | | ಶಿವನಮೂರ್ತಿ ಶಿವಗಿರಿ |

| ಕ್ರ.ಸಂ. | ತಾಲ್ಲೂಕಿನ ಹೆಸರು | ಪ್ರವಾಸಿ ತಾಣದ ಹೆಸರು |
|---|---|---|
| 8 | ತಿಕೋಟ | ಶ್ರೀ ನರಸಿಂಹ ದೇವಸ್ಥಾನ ತೊರವಿ ಗ್ರಾಮ |
| 9 | | ಸಂಗೀತ ಮಹಲ, ತೊರವಿ ಗ್ರಾಮ |
| 10 | | ಶ್ರೀ ಲಕ್ಷ್ಮೀ ದೇವಸ್ಥಾನ ತೊರವಿ ಗ್ರಾಮ |
| 11 | | ಶ್ರೀ ದರಿದೇವರ ದೇವಸ್ಥಾನ, ಕನಮಡಿ ಗ್ರಾಮ |
| 12 | | ಶ್ರೀ ಅಮೋಘಸಿದ್ಧ ದೇವಸ್ಥಾನ, ಜಾಲಗೇರಿ ಮುಮ್ಮಟ ಗುಡ್ಡ- ಅರಕೇರಿ ಗ್ರಾಮ |
| 13 | | ಹಾಜಿಮಸ್ತಾನ ದರ್ಗಾ, ತಿಕೋಟ |
| 14 | ಬಬಲೇಶ್ವರ | ಶ್ರೀ ಸಂಗಮನಾಥ ದೇವಸ್ಥಾನ ಉಪ್ಪಲದಿನ್ನಿ |
| 15 | | ಶ್ರೀ ಹರಳಯ್ಯನ ಗುಂಡ ಶೇಗುಣಸಿ |
| 16 | ಬಸವನ ಬಾಗೇವಾಡಿ | ಶ್ರೀ ಬಸವೇಶ್ವರ ದೇವಸ್ಥಾನ, ಬಸವನ ಬಾಗೇವಾಡಿ |
| 17 | | ಶ್ರೀ ಜಗಜ್ಯೋತಿ ಬಸವೇಶ್ವರ ರವರ ಜನ್ಮಸ್ಥಳ - ಇಂಗಳೇಶ್ವರ ಗ್ರಾಮ |
| 18 | ನಿಡಗುಂದಿ | ಲಾಲ ಬಹದ್ದೂರ ಶಾಸ್ತ್ರಿ ಆಣೆಕಟ್ಟು ಆಲಮಟ್ಟಿ ಗ್ರಾಮ |
| 19 | ಮುದ್ದೇಬಿಹಾಳ | ಶ್ರೀ ಯಲಗೂರೇಶ್ವರ ಆಂಜನೇಯ ದೇವಸ್ಥಾನ ಯಲಗೂರು ಗ್ರಾಮ |
| 20 | | ಶ್ರೀ ನಿಲಾಂಬಿಕೆ ರವರ ದೇವಸ್ಥಾನ ಹಾಗೂ ಯುದ್ಧಭೂಮಿ, ತಂಗಡಗಿ ಗ್ರಾಮ |
| 21 | | ಶ್ರೀ ಕೊಟ್ಟೂರು ಬಸವೇಶ್ವರ ದೇವಸ್ಥಾನ, ಕೋಳುರು ಗ್ರಾಮ |
| 22 | | ಶ್ರೀ ಈಶ್ವರಲಿಂಗ ದೇವಸ್ಥಾನ, ಕೋಳುರು ಗ್ರಾಮ |
| 23 | ಇಂಡಿ | ಶ್ರೀ ರೇವಣ ಸಿದ್ದೇಶ್ವರ ದೇವಸ್ಥಾನ, ಹೋರ್ತಿಗ್ರಾಮ, |
| 24 | | ಶ್ರೀ ಜಟ್ಟೆಂಗೇಶ್ವರ ದೇವಸ್ಥಾನ, ಹಿರೇರೂಗಿ ಗ್ರಾಮ, |
| 25 | | ಶ್ರೀ ಶಿವಯೋಗೇಶ್ವರ ದೇವಸ್ಥಾನ, ಸಾಲೋಟಗಿ ಗ್ರಾಮ |
| 26 | | ಶ್ರೀ ಪ್ರಭುಲಿಂಗೇಶ್ವರ ದೇವಸ್ಥಾನ, ಹಲಸಂಗಿ ಗ್ರಾಮ |
| 27 | | ಶ್ರೀ ಸಿದ್ಧಲಿಂಗ ಮಹಾರಾಜರ ಮಠ ಸಾ: ಲಚ್ಯಾಣ |
| 28 | ಸಿಂದಗಿ | ಶ್ರೀ ದವಲ ಮಲೀಕ ದರ್ಗಾ, ಯಂಕಂಚಿ ಗ್ರಾಮ, |
| 29 | ದೇವರ ಹಿಪ್ಪರಗಿ | ಶ್ರೀ ದತ್ತಾತ್ರೇಯ ದೇವಸ್ಥಾನ, ಚಟ್ಟರಕಿ ಗ್ರಾಮ, |
| 30 | | ಶ್ರೀ ಸೋಮೇಶ್ವರ ದೇವಸ್ಥಾನ –ಕಡ್ಲೆವಾಡ ಗ್ರಾಮ |
| 31 | | ಶ್ರೀ ಮಲ್ಲಯ್ಯಾ ದೇವಸ್ಥಾನ ಹಾಗೂ ಶ್ರೀ ಕಲ್ಮೇಶ್ವರ ದೇವಸ್ಥಾನ, ದೇವರ ಹಿಪ್ಪರಗಿ |
| 32 | | ಶ್ರೀ ಮಡಿವಾಳ ಮಾಚಿದೇವರ ದೇವಸ್ಥಾನ, ದೇವರ ಹಿಪ್ಪರಗಿ, |
| 33 | ಚಡಚಣ | ಶ್ರೀ ಶಂಕರಲಿಂಗ ದೇವಸ್ಥಾನ, ದೂಳಖೇಡ |

# ಅನುಬಂಧ-2

**ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ರಾಜ್ಯದ ಪ್ರವಾಸೋದ್ಯಮವನ್ನು ಬಲಪಡಿಸಲು ಹಾಗೂ ಪ್ರವಾಸಿಗರನ್ನು ಸೆಳೆಯಲು ಸರ್ಕಾರ ಹಾಕಿಕೊಂಡಿರುವ ಯೋಜನೆಗಳು ಹಾಗೂ ರೂಪುರೇಷೆಗಳ ವಿವರಗಳು:**

1. **ಬಾಗಲಕೋಟೆ ಜಿಲ್ಲೆ:**

- ಬಾಗಲಕೋಟೆ ಜಿಲ್ಲೆಯನ್ನು ಒಳಗೊಂಡಂತೆ ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಕರ್ನಾಟಕ ಪ್ರವಾಸೋದ್ಯಮ ನೀತಿ 2024-29 ನ್ನು ಜಾರಿಗೆ ತರಲಾಗಿರುತ್ತದೆ. ಸದರಿ ನೀತಿಯಡಿ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಮುಂದೆ ಬರುವ ಖಾಸಗಿ ಹೂಡಿಕೆದಾರರನ್ನು ಪ್ರೋತ್ಸಾಹಿಸಲು 25 ಪ್ರವಾಸಿ ಉತ್ಪನ್ನಗಳನ್ನು ಗುರುತಿಸಲಾಗಿರುತ್ತದೆ. ಈ ಉತ್ಪನ್ನಗಳಲ್ಲಿ ಹೂಡಿಕೆ ಮಾಡಲು ಇಚ್ಛಿಸುವ ಖಾಸಗಿ ಉದ್ದಿಮೆದಾರರಿಗೆ ನಿಯಮಾನುಸಾರ ಸಹಾಯಧನ, ರಿಯಾಯಿತಿ ಹಾಗೂ ಪ್ರೋತ್ಸಾಹಕಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.

- ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರವಾಸಿಗರನ್ನು ಸೆಳೆಯಲು ದೇಶ ಹಾಗೂ ವಿದೇಶಗಳಲ್ಲಿ ನಡೆಯುವ ಪ್ರವಾಸಿ ಮೇಳ ಹಾಗೂ ರೋಡ್- ಶೋ ಗಳಲ್ಲಿ ಇಲಾಖೆಯಿಂದ ಮಳಿಗೆ ತೆರೆದು ಭಾಗವಹಿಸುವ ಮೂಲಕ ಬಾಗಲಕೋಟೆ ಜಿಲ್ಲೆಯ ಪ್ರವಾಸಿ ತಾಣಗಳನ್ನು ವ್ಯಾಪಕವಾಗಿ ಪ್ರಚಾರಪಡಿಸಲಾಗುತ್ತಿದೆ.

- ಬಾಗಲಕೋಟೆ ಜಿಲ್ಲೆಯ ಪ್ರವಾಸೋದ್ಯಮ ಪ್ರಚಾರ ದೃಷ್ಟಿಯಿಂದ 2013-14ನೇ ಸಾಲಿನಿಂದ 2022-23ನೇ ಸಾಲಿನವರೆಗೆ ಒಟ್ಟು ರೂ.90.00 ಲಕ್ಷಗಳನ್ನು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗೆ ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಅನುದಾನದಲ್ಲಿ ರೂ.87.26 ಲಕ್ಷಗಳ ಅನುದಾನದಲ್ಲಿ ಪ್ರವಾಸಿ ಹೋರ್ಡಿಂಗ್ಸ್, ಸೈನೇಜಸ್, ಕನ್ನಡ- ಆಂಗ್ಲ ಭಾಷೆಯಲ್ಲಿ ಪ್ರವಾಸಿ ಕೈಪಿಡಿಗಳು, ಪ್ರವಾಸಿ ತಾಣಗಳ ವಿಡಿಯೋ ದೃಶ್ಯ ತುಣುಕುಗಳು, ಕಾಫಿ ಟೇಬಲ್ ಪುಸ್ತಕಗಳು, ಕ್ಯಾಲೆಂಡರ್ ಗಳು, ರೋಲ್ ಅಪ್ಸ್, ಫೋಟೋ ಫ್ರೇಮ್‌ಗಳನ್ನು ತಯಾರಿಸುವುದರ ಮೂಲಕ ಜಿಲ್ಲೆಯ ಪ್ರವಾಸಿ ಆಕರ್ಷಣೆಗಳನ್ನು ವ್ಯಾಪಕರವಾಗಿ ಪ್ರಚಾರಪಡಿಸಲು ಕ್ರಮವಹಿಸಲಾಗಿದೆ.

- ಬಾದಾಮಿ-ಐಹೊಳೆ-ಪಟ್ಟದಕಲ್ಲು ಸ್ಥಳಗಳು ಒಳಗೊಂಡಿರುವ ಉತ್ತರ ಕರ್ನಾಟಕ ಪ್ರವಾಸಿ ವೃತ್ತವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ರೂ.166.22 ಕೋಟಿ ಅಂದಾಜು ವೆಚ್ಚದಲ್ಲಿ ವಿನ್ಯಾಸ, ನಿರ್ಮಾಣ, ಹಣಕಾಸು, ನಿರ್ವಹಣೆ ಮತ್ತು ವರ್ಗಾವಣೆ (DBFOT) ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಇಲಾಖೆಯ ಅಂಗಸಂಸ್ಥೆಯಾದ ಮ: ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ (ಕೆ.ಟಿ.ಐ.ಎಲ್.) ಮೂಲಕ ಸೂಕ್ತ ಹೂಡಿಕೆದಾರರ ಆಯ್ಕೆಗಾಗಿ ಟೆಂಡರ್ ಕರೆಯಲಾಗಿರುತ್ತದೆ.

- ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಚಿಕ್ಕಸಂಗಮದಿಂದ ಹೆರಕಲ್ ಗ್ರಾಮದವರೆಗೆ ವ್ಯಾಪಿಸಿರುವ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಜಲಸಾಹಸ ಕ್ರೀಡಾ ಚಟುವಟಿಕೆಗಳನ್ನು ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು ರವರಿಂದ ಅನುಮತಿಯನ್ನು ಪಡೆಯಲಾಗಿದೆ. ಜಲಸಾಹಸ ಕ್ರೀಡಾ ಚಟುವಟಿಕೆಗಳನ್ನು ಪ್ರಾರಂಭಿಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ.

- 'ಸಾಗರ ಮಾಲಾ' ಯೋಜನೆಯಡಿ ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಹೆರಕಲ್ ಗ್ರಾಮದಿಂದ ಆಲಮಟ್ಟಿ ಅಣೆಕಟ್ಟು ವರೆಗೆ ಹಿನ್ನೀರಿನಲ್ಲಿ River Cruise Tourism ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದೆ. ಈಗಾಗಲೇ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ವತಿಯಿಂದ ಹೆರಕಲ್ ಗ್ರಾಮದ ವ್ಯಾಪ್ತಿಯಲ್ಲಿ ಜೆಟ್ಟಿ ನಿರ್ಮಾಣಕ್ಕೆ ಜಮೀನನ್ನು ಗುರುತಿಸಲಾಗಿದೆ.

- ಬಾಗಲಕೋಟೆ ಜಿಲ್ಲೆಯಲ್ಲಿರುವ ಚಾಲುಕ್ಯರ ಸಾಂಸ್ಕೃತಿಕ ಮತ್ತು ಐತಿಹಾಸಿಕ ಹಿರಿಮೆಯನ್ನು ಜಗತ್ತಿಗೆ ಸಾರಲು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಬಾಗಲಕೋಟೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಗೂ ಪ್ರವಾಸೋದ್ಯಮ ಇಲಾಖೆ ಬೆಂಗಳೂರು ಇವರ ಸಹಯೋಗದಲ್ಲಿ ಚಾಲುಕ್ಯ ಉತ್ಸವ-2025ರ ಕಾರ್ಯಕ್ರಮವನ್ನು 2025ರ ಜನವರಿ 19, 20 ಮತ್ತು 21 ರಂದು ಅನುಕ್ರಮವಾಗಿ ಬಾದಾಮಿ ಪಟ್ಟದಕಲ್ಲು ಮತ್ತು ಐಹೊಳೆ ಪ್ರವಾಸಿ ತಾಣಗಳಲ್ಲಿ ಯಶಸ್ವಿಯಾಗಿ ಆಯೋಜಿಸಲಾಗಿದೆ

- ಸರ್ಕಾರದ ಆದೇಶ ಸಂಖ್ಯೆ: ಟಿಒಆರ್ 58 ಟಿಡಿವಿ 2024 ದಿನಾಂಕ:17/01/2025ರಲ್ಲಿ ಭಾರತೀಯ ದೇವಾಲಯಗಳ ವಾಸ್ತುಶಿಲ್ಪದ ತೊಟ್ಟಿಲು ಎಂದೆ ಪ್ರಸಿದ್ಧವಾಗಿರುವ ಬಾಗಲಕೋಟೆ ಜಿಲ್ಲೆಯ ಐಹೊಳೆ ಪ್ರವಾಸಿ ತಾಣದಲ್ಲಿರುವ 8 ಸ್ಮಾರಕಗಳಲ್ಲಿ ವಾಸವಾಗಿರುವ 134 ಕುಟುಂಬಗಳ ಪುನರ್ವಸತಿ ಕಲ್ಪಿಸಲು ಈಗಾಗಲೇ 13.11 ಎಕರೆ ಜಮೀನನ್ನು ಖರೀದಿಸಲಾಗಿದೆ. ವಾಸದ ಮನೆಗಳನ್ನು ತೆರವುಗೊಳಿಸಲು

ಕರ್ನಾಟಕ ರಾಜ್ಯ ಹ್ಯಾಬಿಟೇಟ್ ಕೇಂದ್ರ ಬೆಂಗಳೂರು ಹಾಗೂ ಹೆಸ್ಕಾಂ ಸಲ್ಲಿಸಿರುವ ಅಂದಾಜಿನ ಪ್ರಕಾರ ಬಡಾವಣೆ ರಚನೆ ಕಾಮಗಾರಿಗಳನ್ನು ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ ಬಾಗಲಕೋಟೆ ಇವರ ವತಿಯಿಂದ ಅನುಷ್ಠಾನಗೊಳಿಸಲು ಅನುಮತಿ ನೀಡಿ ಆದೇಶಿಸಿದೆ. ಮುಂದುವರೆದು ಐಹೊಳೆ ಗ್ರಾಮದಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯ ಹ್ಯಾಬಿಟೇಟ್ ಕೇಂದ್ರ ಬೆಂಗಳೂರು ಇವರು ಸಿದ್ಧಪಡಿಸಿರುವ ರೂ.799.10ಲಕ್ಷಗಳ ಅಂದಾಜುಪಟ್ಟಿಗೆ ಸರ್ಕಾರದ ಅನುಮೋದನೆಗೆ ಸ್ವೀಕೃತವಾಗಿರುತ್ತದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರಕ್ಕೆ ಅನುದಾನ ಬಿಡುಗಡೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮವಹಿಸಲಾಗುತ್ತಿದೆ.

- ಬಾದಾಮಿಯನ್ನು ವಿಶ್ವ ದರ್ಜೆಯ ಶಿಲಾರೋಹಣ ತಾಣವಾಗಿ ಪ್ರದರ್ಶಿಸಲು ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ವತಿಯಿಂದ ದಿನಾಂಕ: 28.03.2026 ರಿಂದ 30.03.2026ರವರೆಗೆ ಬಾದಾಮಿಯಲ್ಲಿ ಬಾದಾಮಿ ರಾಕ್ ಫೆಸ್ಟಿವಲ್ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ರಾಜ್ಯ ಮತ್ತು ಹೊರ ರಾಜ್ಯದ 200 ಕ್ರೀಡಾಪಟುಗಳು ಮತ್ತು ತಾಂತ್ರಿಕ ಪರಿಣಿತರು ಭಾಗವಹಿಸುತ್ತಿದ್ದಾರೆ.

- ಪಟ್ಟದಕಲ್ಲು ಪ್ರವಾಸಿ ತಾಣದ ಸ್ಮಾರಕಗಳ ಎದುರಿಗೆ ಸರ್ವೇ ನಂ. 3/1 ಅ1 ಹಾಗೂ 3/1 ಅ2 ರಲ್ಲಿ ಪ್ರವಾಸೋದ್ಯಮ ಇಲಾಖೆಯ ಹೆಸರಿನಲ್ಲಿರುವ 2.31 ಎಕರೆ ಜಮೀನನ್ನು ಇಲ್ಲಿಗೆ ಭೇಟಿ ನೀಡುವ ಪ್ರವಾಸಿಗರ ಅನುಕೂಲಕ್ಕಾಗಿ ಪಾರ್ಕಿಂಗ್ ಸೌಲಭ್ಯ ಅಭಿವೃದ್ಧಿಪಡಿಸಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆ.ಎಸ್.ಟಿ.ಡಿ.ಸಿ.), ಬೆಂಗಳೂರು ರವರಿಗೆ ಹಸ್ತಾಂತರಿಸಲಾಗಿದ್ದು, ಕೆ.ಎಸ್.ಟಿ.ಡಿ.ಸಿ, ಪ್ರವಾಸೋದ್ಯಮ ಇಲಾಖೆ ಹಾಗೂ ಚಾಲುಕ್ಯ ಅಭಿವೃದ್ಧಿ ಪ್ರಾಧಿಕಾರಗಳ ಮಧ್ಯೆ ತ್ರಿಪಕ್ಷೀಯ ಒಪ್ಪಂದ ಮಾಡಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

- ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆ.ಎಸ್.ಟಿ.ಡಿ.ಸಿ.)ಯು ಪ್ರವಾಸಿಗರ ಅನುಕೂಲಕ್ಕಾಗಿ ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿ ಮಯೂರ ಚಾಲುಕ್ಯ ಹೋಟೆಲ್ ಅನ್ನು ನಡೆಸುತ್ತಿದ್ದು, ಸದರಿ ಹೋಟೆಲ್ ನಲ್ಲಿ 32 ಕೊಠಡಿಗಳಿದ್ದು, ಉಪಹಾರಗೃಹ, ವೈಫೈ ಸೌಲಭ್ಯ, 24*7 ಸ್ವಾಗತ ಸೌಲಭ್ಯಗಳನ್ನು ಪ್ರವಾಸಿಗರಿಗೆ ಒದಗಿಸುತ್ತಿದೆ.

## 2. ವಿಜಯಪುರ ಜಿಲ್ಲೆ:

- ವಿಜಯಪುರ ಜಿಲ್ಲೆಯನ್ನು ಒಳಗೊಂಡಂತೆ ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಕರ್ನಾಟಕ ಪ್ರವಾಸೋದ್ಯಮ ನೀತಿ 2024-29 ನ್ನು ಜಾರಿಗೆ ತರಲಾಗಿರುತ್ತದೆ. ಸದರಿ ನೀತಿಯಡಿ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಮುಂದೆ ಬರುವ ಖಾಸಗಿ ಹೂಡಿಕೆದಾರರನ್ನು ಪ್ರೋತ್ಸಾಹಿಸಲು 25 ಪ್ರವಾಸಿ ಉತ್ಪನ್ನಗಳನ್ನು ಗುರುತಿಸಲಾಗಿರುತ್ತದೆ. ಈ ಉತ್ಪನ್ನಗಳಲ್ಲಿ ಹೂಡಿಕೆ ಮಾಡಲು ಇಚ್ಛಿಸುವ ಖಾಸಗಿ ಉದ್ಯಮದಾರರಿಗೆ ನಿಯಮಾನುಸಾರ ಸಹಾಯಧನ, ರಿಯಾಯಿತಿ ಹಾಗೂ ಪ್ರೋತ್ಸಾಹಕಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.

- ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರವಾಸಿಗರನ್ನು ಸೆಳೆಯಲು ದೇಶ ಹಾಗೂ ವಿದೇಶಗಳಲ್ಲಿ ನಡೆಯುವ ಪ್ರವಾಸಿ ಮೇಳ ಹಾಗೂ ರೋಡ್-ಶೋ ಗಳಲ್ಲಿ ಇಲಾಖೆಯಿಂದ ಮಳಿಗೆ ತೆರೆದು ಭಾಗವಹಿಸುವ ಮೂಲಕ ವಿಜಯಪುರ ಜಿಲ್ಲೆಯ ಪ್ರವಾಸಿ ತಾಣಗಳನ್ನು ವ್ಯಾಪಕವಾಗಿ ಪ್ರಚಾರಪಡಿಸಲಾಗುತ್ತಿದೆ.

- Renew Energy ಸಂಸ್ಥೆಯ ರವರ ಸಿ.ಎಸ್.ಆರ್ ಅನುದಾನದಡಿ ವಿಜಯಪುರ ನಗರದಲ್ಲಿರುವ ಐತಿಹಾಸಿಕ ಗೋಲ ಗುಮ್ಮಟ ಸ್ಮಾರಕಕ್ಕೆ ಸೋಲಾರ ಮುಖಾಂತರ ದೀಪಾಲಂಕಾರ ಮಾಡಿ ಪ್ರವಾಸಿಗರನ್ನು ಸೆಳೆಯುವಂತೆ ಮಾಡಲಾಗಿದೆ.

- Adopt a Monument ಯೋಜನೆಯಡಿ ವಿಜಯಪುರ ನಗರದಲ್ಲಿರುವ ಐತಿಹಾಸಿಕ ತಾಜ್ ಬಾವಡಿ ಯನ್ನು ಸಂರಕ್ಷಣೆ ಮತ್ತು ಅಭಿವೃದ್ಧಿಪಡಿಸುವ ಉದ್ದೇಶದಿಂದ ಮ: TCS foundation ಸಂಸ್ಥೆಯ ಸಿಎಸ್.ಆರ್ ಅನುದಾನದಡಿ ಅಭಿವೃದ್ಧಿಪಡಿಸಲಾಗುತ್ತಿದ್ದು, ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

- ವಿಜಯಪುರ ಹಾಗೂ ಬಾಗಲಕೋಟೆ ಹೋಟೆಲ್ ಉದ್ಯಮದಾರರು /ಟ್ರಾವೆಲ್ ಏಜೆನ್ಸಿ ಪ್ರವಾಸೋದ್ಯಮ ಭಾಗಿದಾರರನ್ನು ಉತ್ತೇಜಿಸಲು ಪ್ರತಿವರ್ಷ Connect ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗುತ್ತಿದೆ.

- ಮೆ: Renew Energy ಸಂಸ್ಥೆಯ ಸಿ ಎಸ್ ಆರ್ ಅನುದಾನದಡಿ ವಿಜಯಪುರ ನಗರದಲ್ಲಿರುವ ಐತಿಹಾಸಿಕ ಗೋಲಗುಮ್ಮಟ ಸ್ಮಾರಕಕ್ಕೆ ಸೋಲಾರ ಮುಖಾಂತರ ದೀಪಾಲಂಕಾರ ಮಾಡಿ ಪ್ರವಾಸಿಗರನ್ನು ಸೆಳೆಯುವಂತೆ ಮಾಡಲಾಗಿದೆ

- 2025-26 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-379 ರಲ್ಲಿ ಘೋಷಿಸಿರುವಂತೆ ವಿಜಯಪುರ ನಗರದಲ್ಲಿ ಕರೇಜ್ ಎಂದು ಪ್ರಸಿದ್ಧವಾಗಿರುವ ಪುರಾತನ ನೀರು ಸರಬರಾಜು ವ್ಯವಸ್ಥೆಯನ್ನು ನುರಿತ ಸಂಸ್ಥೆಗಳ ತಾಂತ್ರಿಕ ನೆರವಿನೊಂದಿಗೆ ಪುನಶ್ಚೇತನಗೊಳಿಸಲು ಮೆ|| ಐ.ಹೆಚ್.ಸಿ.ಎನ್.ಎಫ್ ಸಂಸ್ಥೆಯನ್ನು ಸಮಾಲೋಚನ ಸಂಸ್ಥೆಯನ್ನಾಗಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯಿಂದ ನೇಮಿಸಿದ್ದು. ಸದರಿ ಸಂಸ್ಥೆಯು ಸಲ್ಲಿಸಿರುವ ಪ್ರಾಥಮಿಕ ವರದಿ (Inception Report) ಗೆ ಭಾರತೀಯ ಪುರಾತತ್ವ ಸರ್ವೇಕ್ಷಣಾಲಯ, ನವದೆಹಲಿ ಇವರ ಅನುಮತಿಯನ್ನು ಪಡೆಯಲು ಕ್ರಮವಹಿಸಲಾಗುತ್ತಿದೆ

- ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆ.ಎಸ್.ಟಿ.ಡಿ.ಸಿ)ಯು ಪ್ರವಾಸಿಗರ ಅನುಕೂಲಕ್ಕಾಗಿ ವಿಜಯಪುರ ನಗರದಲ್ಲಿ ಮಯೂರ ಆದಿಲ್ ಶಾಹಿ ಹೋಟೆಲ್ ಅನ್ನು ನಡೆಸುತ್ತಿದ್ದು, ಸದರಿ ಹೋಟೆಲ್ ನಲ್ಲಿ 21 ಕೊಠಡಿಗಳಿದ್ದು, ಉಪಹಾರಗೃಹ, ವೈಫೈ ಸೌಲಭ್ಯ, 24*7 ಸ್ವಾಗತ ಸೌಲಭ್ಯಗಳನ್ನು ಪ್ರವಾಸಿಗರಿಗೆ ಒದಗಿಸುತ್ತಿದೆ.

*****

# ಅನುಬಂಧ-3

## ಇಲಾಖೆಯ ಲೆಕ್ಕಶೀರ್ಷಿಕೆ ಸಂಖ್ಯೆ: 5452-01-101-0-01-132 ರಡಿ ವಿವಿಧ ಸ್ಥಳಗಳಲ್ಲಿ ಪ್ರವಾಸೋದ್ಯಮ ಮೂಲಭೂತ ಸೌಕರ್ಯ, ಬಂಡವಾಳ ವೆಚ್ಚಗಳ ಅಡಿ ಕಳೆದ ಮೂರು ವರ್ಷಗಳಲ್ಲಿ ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಗಳಿಗೆ ಮಂಜೂರು/ಬಿಡುಗಡೆ ಮಾಡಿರುವ ಅನುದಾನದ ವಿವರ

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್ 2022 ರ ಅಂತ್ಯದ ವರೆಗೆ ಬಿಡುಗಡೆ ಮಾಡಿರುವ ಅನುದಾನ | ಬಿಡುಗಡೆ ಮಾಡಿರುವ ಅನುದಾನ | | | | ಬಾಕಿ | ಷರಾ |
|---|---|---|---|---|---|---|---|---|---|---|
| | | | | | 2022-23 | 2023-24 | 2024-25 | 2025-26 | | |
| 1 | 2 | 3 | 4 | 5 | 6 | 7 | 8 | 9 | 10 | 11 |
| | **ಬಾಗಲಕೋಟೆ ಜಿಲ್ಲೆ** | | | | | | | | | |
| | **ಬಾಗಲಕೋಟೆ ತಾಲ್ಲೂಕು** | | | | | | | | | |
| 1 | ಬಾಗಲಕೋಟೆ ತಾಲ್ಲೂಕಿನ ಸಿಮಿಕೇರಿ ಗ್ರಾಮದ ಲಡ್ಡುಮುತ್ಯಾ ಕ್ಷೇತ್ರದ ಬಳಿ 12 ಹಾಸಿಗೆಗಳ 4 ಡಾರ್ಮಿಟರಿ ಹಾಗೂ ಶೌಚಾಲಯದ ಸೌಲಭ್ಯಗಳ ನಿರ್ಮಾಣ. (ಮೂಲ ಅಂದಾಜು ಮೊತ್ತ ರೂ.124.01 ಲಕ್ಷಗಳು) | 154.79 | ಪ್ರವಾಸೋದ್ಯಮ ಇಲಾಖೆ | 126.20 | 0.00 | 0.00 | 28.59 | 0.00 | 0.00 | ಪೂರ್ಣಗೊಂಡಿದೆ |
| 2 | ಬಾಗಲಕೋಟೆ ತಾಲ್ಲೂಕಿನ ಯಡಹಳ್ಳಿ, ಶ್ರೀ ಅಜಾತ ನಾಗಲಿಂಗೇಶ್ವರ ಮಠದ ಬಳಿ ಯಾತ್ರಿನಿವಾಸ ನಿರ್ಮಾಣ. | 27.37 | ಕೆಆರ್‌ಐಡಿಎಲ್ | 18.75 | 6.25 | 0.00 | 0.00 | 2.37 | 0.00 | ಪೂರ್ಣಗೊಂಡಿದೆ |
| | **ಬೀಳಗಿ ತಾಲ್ಲೂಕು** | | | | | | | | | |
| 3 | ಬೀಳಗಿ ತಾಲ್ಲೂಕಿನ ಹೊನ್ನಿಹಾಳ ಪುನರ್‌ವಸತಿ ಕೇಂದ್ರದಲ್ಲಿರುವ ಸೋಮನಾಥ ದೇವಾಲಯ ಆವರಣದಲ್ಲಿ ಯಾತ್ರಿನಿವಾಸ ನಿರ್ಮಾಣ. | 27.37 | ಕೆಆರ್‌ಐಡಿಎಲ್ | 18.75 | 6.25 | 0.00 | 0.00 | 2.37 | 0.00 | ಪೂರ್ಣಗೊಂಡಿದೆ |
| 4 | ಬಾಗಲಕೋಟೆ ಜಿಲ್ಲೆ ಬೀಳಗಿ ತಾಲ್ಲೂಕಿನ ಕುಂದರಗಿ ಶ್ರೀ ಭುವನೇಶ್ವರಿ ದೇವಿ ದೇವಸ್ಥಾನ ಸುರಗಿರಿ ಬೆಟ್ಟದಲ್ಲಿ ಮೂಲಭೂತ ಸೌಲಭ್ಯ ಕಾಮಗಾರಿ | 50.00 | ಕೆ.ಟಿ.ಐ.ಎಲ್ | 0.00 | 0.00 | 16.00 | 0.00 | 0.00 | 34.00 | ಅನುಷ್ಠಾನ ಸಂಸ್ಥೆಯಿಂದ ಅಂದಾಜು ಪಟ್ಟಿ ಬರಬೇಕಿದೆ. |
| | **ಹುನಗುಂದ ತಾಲ್ಲೂಕು** | | | | | | | | | |
| 5 | ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕು, ಪಾಪತನಾಳ ಗ್ರಾಮ ಶ್ರೀ ಪಾಪೇಶ್ವರ ದೇವಸ್ಥಾನದ ಹತ್ತಿರ ಯಾತ್ರಿನಿವಾಸ | 100.00 | ನಿರ್ಮಿತಿ ಕೇಂದ್ರ | 85.00 | 15.00 | 0.00 | 0.00 | 0.00 | 0.00 | ಪೂರ್ಣಗೊಂಡಿದೆ |
| | **ಜಮಖಂಡಿ ತಾಲ್ಲೂಕು** | | | | | | | | | |
| 6 | ಜಮಖಂಡಿ ತಾಲ್ಲೂಕು ಮೈಗೂರು ಗ್ರಾಮದ ಶ್ರೀ ಶಿವಾನಂದ ಮಠದ ಬಳಿ ಯಾತ್ರಿನಿವಾಸ ಹಾಗೂ ಮೂಲಭೂತ ಸೌಕರ್ಯ ಅಭಿವೃದ್ಧಿ | 75.00 | ನಿರ್ಮಿತಿ ಕೇಂದ್ರ | 25.00 | 40.00 | 0.00 | 0.00 | 0.00 | 10.00 | ಪೂರ್ಣಗೊಂಡಿದೆ |
| | **ರಬಕವಿ-ಬನಹಟ್ಟಿ ತಾಲ್ಲೂಕು** | | | | | | | | | |
| 7 | ಬನಹಟ್ಟಿ ನಗರದ ಹಳೆಯಲ್ಲಮ್ಮ ದೇವಸ್ಥಾನದ ಆವರಣದಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳಲ್ಲಿ ಚೈನ್‌ಲಿಂಕ್, ಆಸನಗಳ ವ್ಯವಸ್ಥೆ ಹಾಗೂ ವಾಹನ ನಿಲುಗಡೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸುವ ಕಾಮಗಾರಿ | 20.00 | ನಿರ್ಮಿತಿ ಕೇಂದ್ರ | 5.00 | 0.00 | 15.00 | 0.00 | 0.00 | 0.00 | ಪೂರ್ಣಗೊಂಡಿದೆ |
| | **ಬಾಗಲಕೋಟೆ ಜಿಲ್ಲೆ ಒಟ್ಟು** | **454.53** | | **278.70** | **67.50** | **31.00** | **28.59** | **4.74** | **44.00** | |

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್ 2022 ರ ಅಂತ್ಯದ ವರೆಗೆ ಬಿಡುಗಡೆ ಮಾಡಿರುವ ಅನುದಾನ | ಬಿಡುಗಡೆ ಮಾಡಿರುವ ಅನುದಾನ | | | | ಬಾಕಿ | ಷರಾ |
|---|---|---|---|---|---|---|---|---|---|---|
| | | | | | 2022-23 | 2023-24 | 2024-25 | 2025-26 | | |
| 1 | 2 | 3 | 4 | 5 | 6 | 7 | 8 | 9 | 10 | 11 |
| | **ವಿಜಯಪುರ ಜಿಲ್ಲೆ** | | | | | | | | | |
| | **ಬಬಲೇಶ್ವರ ತಾಲ್ಲೂಕು** | | | | | | | | | |
| 8 | ವಿಜಯಪುರ ಜಿಲ್ಲೆ ಬಬಲೇಶ್ವರ ಕ್ಷೇತ್ರದ ಬಿಜ್ಜರಗಿ ಗ್ರಾಮದ ಶ್ರೀ ಬುದ್ಧವಿಹಾರ ಬುದ್ಧನಗರ ಹತ್ತಿರ ಯಾತ್ರಿನಿವಾಸ ನಿರ್ಮಾಣ | 50.00 | ನಿರ್ಮಿತಿ ಕೇಂದ್ರ | 40.00 | 10.00 | 0.00 | 0.00 | 0.00 | 0.00 | ಪೂರ್ಣಗೊಂಡಿದೆ |
| | **ಬಸವನ ಬಾಗೇವಾಡಿ ತಾಲ್ಲೂಕು** | | | | | | | | | |
| 9 | ಬಸವನ ಬಾಗೇವಾಡಿ ತಾಲ್ಲೂಕಿನ ಮುಳವಾಡ ಗ್ರಾಮದ ಶ್ರೀ ಮಹಾದೇವ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ. | 25.00 | ಕೆ.ಆರ್.ಐ.ಡಿ.ಎಲ್ | 18.75 | 6.25 | 0.00 | 0.00 | 0.00 | 0.00 | ಪೂರ್ಣಗೊಂಡಿದೆ |
| 10 | ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ಪ್ರವಾಸಿ ಕೇಂದ್ರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಯಾತ್ರಿನಿವಾಸದವರೆಗೆ ರೂ.25.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿ | 25.00 | ಕೆ.ಆರ್.ಐ.ಡಿ.ಎಲ್ | 0.00 | 0.00 | 8.00 | 0.00 | 0.00 | 17.00 | ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಸಿದ್ಧಪಡಿಸಿ ಸಲ್ಲಿಸುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. |
| | **ಇಂಡಿ ತಾಲ್ಲೂಕು** | | | | | | | | | |
| 11 | ಇಂಡಿ ತಾಲ್ಲೂಕಿನ ಅಗರಖೇಡ ಗ್ರಾಮದ ಶ್ರೀ ಪ್ರಭುಲಿಂಗೇಶ್ವರ ವಿರಕ್ತ ಮಠದ ಬಳಿ ಯಾತ್ರಿನಿವಾಸ ನಿರ್ಮಾಣ (ಇಂಡಿ ತಾಲ್ಲೂಕು ಅಥರ್ಗಾ ಗ್ರಾಮ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಆಶ್ರಮದ ಬಳಿ ಯಾತ್ರಿನಿವಾಸ ನಿರ್ಮಾಣ ಬದಲಾಗಿ) | 25.00 | ನಿರ್ಮಿತಿ ಕೇಂದ್ರ | 10.00 | 15.00 | 0.00 | 0.00 | 0.00 | 0.00 | ಪೂರ್ಣಗೊಂಡಿದೆ |
| | **ಮುದ್ದೇಬಿಹಾಳ ತಾಲ್ಲೂಕು** | | | | | | | | | |
| 12 | ವಿಜಯಪುರ ಜಿಲ್ಲೆ ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರ ಸರೂರು ಗ್ರಾಮದ ಶ್ರೀ ರೇವಣಸಿದ್ಧೇಶ್ವರ ಗುರುಮಠ ಹತ್ತಿರ ಯಾತ್ರಿನಿವಾಸ ನಿರ್ಮಾಣ | 100.00 | ನಿರ್ಮಿತಿ ಕೇಂದ್ರ | 50.00 | 40.00 | 0.00 | 10.00 | 0.00 | 0.00 | ಪೂರ್ಣಗೊಂಡಿದೆ |
| | **ವಿಜಯಪುರ ತಾಲ್ಲೂಕು** | | | | | | | | | |
| 13 | ವಿಜಯಪುರ ತಾಲ್ಲೂಕಿನ ಕನ್ನೂರು ಗ್ರಾಮದ ದರ್ಗಾದ ಹತ್ತಿರ ಯಾತ್ರಿನಿವಾಸ ನಿರ್ಮಾಣ. | 70.00 | ಕೆಆರ್ಐಡಿಎಲ್ | 55.00 | 15.00 | 0.00 | 0.00 | 0.00 | 0.00 | ಪೂರ್ಣಗೊಂಡಿದೆ |
| 14 | ವಿಜಯಪುರ ತಾಲ್ಲೂಕಿನ ಕನಮಡಿ ಗ್ರಾಮದ ಧರಿದೇವರ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ನಿರ್ಮಾಣ. | 100.00 | ಕೆಆರ್ಐಡಿಎಲ್ | 50.00 | 20.00 | 0.00 | 0.00 | 0.00 | 30.00 | ಪ್ರಗತಿಯಲ್ಲಿದೆ |
| 15 | ವಿಜಯಪುರ ತಾಲ್ಲೂಕಿನ ಲೋಹಗಾಂವ ಗ್ರಾಮದ ವಿರಕ್ತಾನವರ ಮಠದ ಸಮಾಜದ ಹತ್ತಿರ ಯಾತ್ರಿನಿವಾಸ ನಿರ್ಮಾಣ. | 25.00 | ಕೆಆರ್ಐಡಿಎಲ್ | 13.00 | 12.00 | 0.00 | 0.00 | 0.00 | 0.00 | ಪೂರ್ಣಗೊಂಡಿದೆ |
| 16 | ವಿಜಯಪುರ ನಗರದ ಹೃದಯ ಭಾಗದಲ್ಲಿರುವ ಗಗನಮಹಲ್ ಕಂದಕ ಪ್ರದೇಶವನ್ನು ಅಭಿವೃದ್ಧಿಪಡಿಸಿ ಬೋಟಿಂಗ್ ವ್ಯವಸ್ಥೆ ಕಲ್ಪಿಸುವ ಕಾಮಗಾರಿ | 150.00 | - | 0.00 | 0.00 | 0.00 | 0.00 | 0.00 | 150.00 | ಅನುಷ್ಠಾನ ಸಂಸ್ಥೆ ಹಾಗೂ ಲೆಕ್ಕಶೀರ್ಷಿಕೆ ನಿಗದಿಪಡಿಸುವಂತೆ ಕೋರಿ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ |

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್ 2022 ರ ಅಂತ್ಯದ ವರೆಗೆ ಬಿಡುಗಡೆ ಮಾಡಿರುವ ಅನುದಾನ | ಬಿಡುಗಡೆ ಮಾಡಿರುವ ಅನುದಾನ | | | | ಬಾಕಿ | ಷರಾ |
|---|---|---|---|---|---|---|---|---|---|---|
| | | | | | 2022-23 | 2023-24 | 2024-25 | 2025-26 | | |
| 1 | 2 | 3 | 4 | 5 | 6 | 7 | 8 | 9 | 10 | 11 |
| 17 | ಸಿಂದಗಿ ನಗರದ ಬಸವ ಮಂಟಪ ಆವರಣದಲ್ಲಿ ಡಾರ್ಮಿಟರಿ/ಯಾತ್ರಿನಿವಾಸ ಕಾಮಗಾರಿ | 25.00 | ಕೆ.ಟಿ.ಐ.ಎಲ್ | 0.00 | 0.00 | 0.00 | 0.00 | 0.00 | 25.00 | ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಸಿದ್ಧಪಡಿಸಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. |
| 18 | ಸಿಂದಗಿಯ ಬೊಮ್ಮನಹಳ್ಳಿ ಗ್ರಾಮದ ಹಿರೇಮಠದ ಆವರಣದಲ್ಲಿ ಡಾರ್ಮಿಟರಿ/ಯಾತ್ರಿನಿವಾಸ ಕಾಮಗಾರಿ | 25.00 | ಕೆ.ಟಿ.ಐ.ಎಲ್ | 0.00 | 0.00 | 0.00 | 0.00 | 0.00 | 25.00 | ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಸಿದ್ಧಪಡಿಸಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. |
| 19 | ಸಿಂದಗಿಯ ಖೈನೂರ ಗ್ರಾಮದ ಶ್ರೀ ಭಗೀರಥ ಭವನದ ಆವರಣದಲ್ಲಿ ಡಾರ್ಮಿಟರಿ/ಯಾತ್ರಿನಿವಾಸ | 25.00 | ಕೆ.ಟಿ.ಐ.ಎಲ್ | 0.00 | 0.00 | 0.00 | 0.00 | 0.00 | 25.00 | ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಸಿದ್ಧಪಡಿಸಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. |
| | **ವಿಜಯಪುರ ಜಿಲ್ಲೆಯ ಒಟ್ಟು** | **645.00** | | **236.75** | **118.25** | **8.00** | **10.00** | **0.00** | **272.00** | |
| | **ಒಟ್ಟು ಮೊತ್ತ** | **1099.53** | | **515.45** | **185.75** | **39.00** | **38.59** | **4.74** | **316.00** | |

## ಇಲಾಖೆಯ ಲೆಕ್ಕಶೀರ್ಷಿಕೆ ಸಂಖ್ಯೆ: 5452-01-101-0-05-132- ಬಂಡವಾಳ ವೆಚ್ಚಗಳು- ಪ್ರವಾಸಿ ತಾಣಗಳಲ್ಲಿ ಪ್ರಧಾನ ಮೂಲಭೂತ ಸೌಕರ್ಯ ಕಾಮಗಾರಿಗಳು ಅಡಿ ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳಿಗೆ ಕಳೆದ 03 ವರ್ಷಗಳಲ್ಲಿ ಬಿಡುಗಡೆ ಮಾಡಿರುವ ಅನುದಾನದ ವಿವರ

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಯ ಹೆಸರು | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್ 2022 ರ ಅಂತ್ಯದವರೆಗೆ ಬಿಡುಗಡೆ ಮಾಡಿರುವ ಅನುದಾನ | ವರ್ಷವಾರು ಬಿಡುಗಡೆ ಮಾಡಿರುವ ಅನುದಾನ | | | | ಷರಾ |
|---|---|---|---|---|---|---|---|---|---|
| | | | | | 2022-23 | 2023-24 | 2024-25 | 2025-26 | |
| | ಬಾಗಲಕೋಟೆ ಜಿಲ್ಲೆ | | | | | | | | |
| | ಬೀಳಗಿ ತಾಲ್ಲೂಕು | | | | | | | | |
| 1 | ಬಾಗಲಕೋಟೆ ಜಿಲ್ಲೆ ಬೀಳಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚಿಕ್ಕಸಂಗಮ ಪ್ರವಾಸಿ ತಾಣದಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸುವುದು. | 200.00 | ಕೆ.ಟಿ.ಐ.ಎಲ್. | 0.00 | 0.00 | 67.00 | 0.00 | 0.00 | ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ದಿನಾಂಕ: 15.04.2024 ರನ್ವಯ ಕಾಮಗಾರಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ |
| | ಬಾದಾಮಿ ತಾಲ್ಲೂಕು | | | | | | | | |
| 2 | ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಶಿವಯೋಗ ಮಂದಿರ ಸುಕ್ಷೇತ್ರಕ್ಕೆ ಆಗಮಿಸುವ ಭಕ್ತಾದಿಗಳು / ಪ್ರವಾಸಿಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ದೃಷ್ಟಿಯಿಂದ ಪುರುಷರು ಮತ್ತು ಮಹಿಳೆಯರ ಸ್ನಾನಗೃಹ ಮತ್ತು ಶೌಚಾಲಯಗಳ ನಿರ್ಮಾಣ ಕಾಮಗಾರಿ | 35.00 | ಕೆ.ಟಿ.ಐ.ಎಲ್. | 0.00 | 0.00 | 35.00 | 0.00 | 0.00 | ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ದಿನಾಂಕ: 15.04.2024 ರನ್ವಯ ಕಾಮಗಾರಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ |
| 3 | ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್ಲಿನಲ್ಲಿರುವ ಇಲಾಖೆಯ 24 ಎಕರೆ ಜಮೀನಿನಲ್ಲಿ ಟೂರಿಸಂ ಪ್ಲಾಜಾ ನಿರ್ಮಾಣ | 2925.00 | ಕರ್ನಾಟಕ ಗೃಹ ಮಂಡಳಿ | 1462.00 | 0.00 | 0.00 | 900.00 | 0.00 | ಪ್ರಗತಿಯಲ್ಲಿದೆ |
| 4 | ಬಾದಾಮಿ ತಾಲ್ಲೂಕಿನ ಬನಶಂಕರಿ ದೇವಸ್ಥಾನ ಪ್ರವಾಸಿ ತಾಣದಲ್ಲಿ ತ್ರಿ ಸ್ಟಾರ್ ಹೋಟೆಲ್ ನಿರ್ಮಾಣ ಕಾಮಗಾರಿ | 1832.00 | ಮೆ: ರೈಟ್‌ಸ್ ಲಿ. ಸಂಸ್ಥೆ | 850.00 | 0.00 | 0.00 | 910.00 | 0.00 | ಪ್ರಗತಿಯಲ್ಲಿದೆ |
| | ವಿಜಯಪುರ ಜಿಲ್ಲೆ | | | | | | | | |
| | ಸಿಂದಗಿ ತಾಲ್ಲೂಕು | | | | | | | | |
| 5 | ಸಿಂದಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗೋಲಗೇರಿ ಗ್ರಾಮದ ಶ್ರೀ ಗೋಲ್ಲಾಳೇಶ್ವರ ದೇವಸ್ಥಾನಕ್ಕೆ ಬರುವ ಪ್ರವಾಸಿಗರು / ಭಕ್ತಾದಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು. | 50.00 | ಕೆ.ಆರ್.ಐ.ಡಿ.ಎಲ್. | 0.00 | 0.00 | 35.00 | 0.00 | 0.00 | ಪ್ರಗತಿಯಲ್ಲಿದೆ |

(ರೂ. ಲಕ್ಷಗಳಲ್ಲಿ

| ಕ್ರ. ಸಂ | ಯೋಜನೆಯ ಹೆಸರು | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್ 2022 ರ ಅಂತ್ಯದವರೆಗೆ ಬಿಡುಗಡೆ ಮಾಡಿರುವ ಅನುದಾನ | ವರ್ಷವಾರು ಬಿಡುಗಡೆ ಮಾಡಿರುವ ಅನುದಾನ | | | | ಷರಾ |
|---|---|---|---|---|---|---|---|---|---|
| | | | | | 2022-23 | 2023-24 | 2024-25 | 2025-26 | |
| 6 | ಸಿಂದಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಯಕಂಚಿ ಗ್ರಾಮದ ಶ್ರೀದಾಲಮಲ್ಲಿಕ ದೇವಸ್ಥಾನಕ್ಕೆ ಬರುವ ಪ್ರವಾಸಿಗರು / ಭಕ್ತಾದಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು. | 50.00 | ಕೆ.ಆರ್. ಐ. ಡಿ.ಎಲ್. | 0.00 | 0.00 | 35.00 | 0.00 | 0.00 | ಪ್ರಗತಿಯಲ್ಲಿದೆ |
| | **ದೇವರಹಿಪ್ಪರಗಿ ತಾಲ್ಲೂಕು** | | | | | | | | |
| 7 | ದೇವರಹಿಪ್ಪರಗಿ ತಾಲ್ಲೂಕಿನ ಶ್ರೀ ಮಡಿವಾಳ ಮಾಚಿದೇವರ ಎಲ್ಲಾ ಕುರುಹುಗಳನ್ನು ಅಭಿವೃದ್ಧಿ ಗೊಳಿಸಿ ಸಾರ್ವಜನಿಕ ಯಾತ್ರಾ ಸ್ಥಳವನ್ನಾಗಿ ಅಭಿವೃದ್ಧಿಪಡಿಸಲು ವಿವಿಧ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ | 100.00 | ಕೆ.ಟಿ. ಐ.ಎಲ್. | 0.00 | 33.00 | 0.00 | 0.00 | 0.00 | ಆರ್ಥಿಕ ಇಲಾಖೆಯ ಸುತ್ತೋಲೆ ದಿನಾಂಕ: 31.07.2023 ಹಾಗೂ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ದಿ: 15.04.2024 ರಲ್ಲಿನ ಸೂಚನೆಗಳನ್ವಯ ಕಾಮಗಾರಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ |
| | **ಇಂಡಿ ತಾಲ್ಲೂಕು** | | | | | | | | |
| 8 | ಇಂಡಿ ತಾಲ್ಲೂಕು ಗುಬ್ಬೇವಾಡಿ ಗ್ರಾಮದ ಗುಬ್ಬತಾಯಿ ದೇವಸ್ಥಾನದಲ್ಲಿ ಯಾತ್ರಿನಿವಾಸ ನಿರ್ಮಾಣ | 25.00 | ಲೋ.ಇ. | 9.00 | 0.00 | 9.00 | 0.00 | 0.00 | ಅನುಷ್ಠಾನ ಸಂಸ್ಥೆಯಿಂದ ಸಲ್ಲಿಸಿರುವ ಅಂದಾಜು ಪಟ್ಟಿಗಳಿಗೆ ನಿವೇಶನ ಹಸ್ತಾಂತರ ಪಡೆದು ಜಿಲ್ಲಾಧಿಕಾರಿಗಳು ಆಡಳಿತಾತ್ಮಕ ಅನುಮೋದನೆ ನೀಡಬೇಕಿದೆ. |
| 9 | ಇಂಡಿ ತಾಲ್ಲೂಕು ಗುಂದವಾನ ಗ್ರಾಮದ ಪೂಜಾರಿ ವಸ್ತಿ ಬಳಿ ಮಾಳಿಂಗರಾಯ ದೇವಸ್ಥಾನದಲ್ಲಿ ಯಾತ್ರಿನಿವಾಸ ನಿರ್ಮಾಣ | 25.00 | ಲೋ.ಇ. | 8.00 | 0.00 | 8.00 | 0.00 | 0.00 | |
| 10 | ಇಂಡಿ ತಾಲ್ಲೂಕು ಅಹಿರಸಂಗ ಗ್ರಾಮದ ಸಯ್ಯದ ಬುಕಾರಿ ದರ್ಗಾ ನವೀಕರಣ | 25.00 | ಲೋ.ಇ. | 8.00 | 0.00 | 8.00 | 0.00 | 0.00 | ಅನುಷ್ಠಾನ ಸಂಸ್ಥೆಯಿಂದ ಸಲ್ಲಿಸಿರುವ ಅಂದಾಜು ಪಟ್ಟಿಗಳಿಗೆ ನಿವೇಶನ ಹಸ್ತಾಂತರ ಪಡೆದು ಜಿಲ್ಲಾಧಿಕಾರಿಗಳು ಆಡಳಿತಾತ್ಮಕ ಅನುಮೋದನೆ ನೀಡಬೇಕಿದೆ. |
| 11 | ಇಂಡಿ ತಾಲ್ಲೂಕು ಅರ್ಜನಾಳ ಗ್ರಾಮದ ಬಲಭೀಮ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ | 25.00 | ಲೋ.ಇ. | 8.00 | 0.00 | 8.00 | 0.00 | 0.00 | |
| 12 | ಇಂಡಿ ತಾಲ್ಲೂಕು ಪಡನೂರ ಗ್ರಾಮದ ಶ್ರೀ ಭೀಮಾಶಂಕರ ದೇವಸ್ಥಾನಕ್ಕೆ ಮೂಲ ಸೌಕರ್ಯ ಒದಗಿಸುವುದು. | 50.00 | ಕೆ. ಆರ್. ಐ.ಡಿ.ಎಲ್. | 0.00 | 0.00 | 20.00 | 0.00 | 0.00 | ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ದಿನಾಂಕ: 15.04.2024 ರನ್ವಯ ಕಾಮಗಾರಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ |
| 13 | ಇಂಡಿ ತಾಲ್ಲೂಕು ತಡವಲಗಾ ಗ್ರಾಮದ ಜೋಡುಗುಡಿ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ಮೂಲಭೂತ ಸೌಕರ್ಯಗಳ ಒದಗಿಸುವುದು. | 50.00 | ಕೆ. ಆರ್. ಐ.ಡಿ.ಎಲ್. | 0.00 | 0.00 | 20.00 | 0.00 | 0.00 | |

(ರೂ. ಲಕ್ಷಗಳಗಳಲ್ಲಿ)

| ಕ್ರ. ಸಂ | ಯೋಜನೆಯ ಹೆಸರು | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್ 2022 ರ ಅಂತ್ಯದವರೆಗೆ ಬಿಡುಗಡೆ ಮಾಡಿರುವ ಅನುದಾನ | ವರ್ಷವಾರು ಬಿಡುಗಡೆ ಮಾಡಿರುವ ಅನುದಾನ | | | | ಷರಾ |
|---|---|---|---|---|---|---|---|---|---|
| | | | | | 2022-23 | 2023-24 | 2024-25 | 2025-26 | |
| 14 | ಇಂಡಿ ತಾಲ್ಲೂಕು ಹರೇಬೇವನೂರು ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ಮೂಲಭೂತ ಸೌಕರ್ಯಗಳ ನಿರ್ಮಾಣ ಕಾಮಗಾರಿ | 12.50 | ಲೋ.ಇ. | 0.00 | 0.00 | 5.00 | 0.00 | 0.00 | ಅನುಷ್ಠಾನ ಸಂಸ್ಥೆಯಿಂದ ಸಲ್ಲಿಸಿರುವ ಅಂದಾಜು ಪಟ್ಟಿಗಳಿಗೆ ನಿವೇಶನ ಹಸ್ತಾಂತರ ಪಡೆದು ಜಿಲ್ಲಾಧಿಕಾರಿಗಳು ಆಡಳಿತಾತ್ಮಕ ಅನುಮೋದನೆ ನೀಡಬೇಕಿದೆ. |
| 15 | ಇಂಡಿ ತಾಲ್ಲೂಕಿನ ಹಿರೇಬೇವನೂರು ಗ್ರಾಮದ ಶ್ರೀ ಮರುಳಸಿದ್ದೇಶ್ವರ ದೇವಸ್ಥಾನದ ಹತ್ತಿರ ಮೂಲಭೂತ ಸೌಕರ್ಯಗಳ ನಿರ್ಮಾಣ ಕಾಮಗಾರಿ | 12.50 | ಲೋ.ಇ. | 0.00 | 0.00 | 5.00 | 0.00 | 0.00 | |
| | **ವಿಜಯಪುರ ತಾಲ್ಲೂಕು** | | | | | | | | |
| 16 | ವಿಜಯಪುರ ನಗರದ ಭೂತನಾಳ ಕೆರೆ ಪ್ರದೇಶದಲ್ಲಿ ತ್ರಿ-ಸ್ಟಾರ್ ಹೋಟೆಲ್ ನಿರ್ಮಾಣ ಕಾಮಗಾರಿ | 1674.00 | ಮೆ: ರೈಟ್ಸ್ ಲಿ. ಸಂಸ್ಥೆ | 1134.00 | 0.00 | 0.00 | 540.00 | 0.00 | ಅಂತಿಮ ಹಂತದಲ್ಲಿದೆ |
| | **ಒಟ್ಟು** | **7091.00** | | **3479.00** | **33.00** | **255.00** | **2350.00** | **0.00** | |

ಅನುಬಂಧ-3

ಅನುಬಂಧ-3

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.

ಕಳೆದ ಮೂರು ವರ್ಷಗಳಲ್ಲಿ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗೆ ಮಂಜೂರಾದ ಕಾಮಗಾರಿಗಳ ವಿವರ ಪಟ್ಟಿ:

ರೂ. ಲಕ್ಷಗಳಲ್ಲಿ.

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಗುತ್ತಿಗೆ ಅನುಮೋದಿತ ಮೊತ್ತ | 2022-23 ಬಿಡುಗಡೆಯಾದ ಅನುದಾನ | ವೆಚ್ಚ | 2023-24 ಬಿಡುಗಡೆಯಾದ ಅನುದಾನ | ವೆಚ್ಚ | 2024-25 ಬಿಡುಗಡೆಯಾದ ಅನುದಾನ | ವೆಚ್ಚ |
|---|---|---|---|---|---|---|---|---|---|---|---|
| 1 | ಬಾಗಲಕೋಟೆ | ಬಾದಾಮಿ | ಬಾಗಲಕೋಟೆ ಜಿಲ್ಲೆ, ಬಾದಾಮಿ ಚಿಕ್ಕಮಹಾಕೂಟೇಶ್ವರ ದೇವಾಲಯದ ಸಂರಕ್ಷಣೆ ಮತ್ತು ಅಭಿವೃದ್ಧಿ. | 135.48 | 135.48 | 25.00 | 29.19 | 30.00 | 31.14 | 70.00 | 72.17 |
| 2 | | ಹುನಗುಂದ | ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕು, ಹಿರೇಮಾಗಿಯಲ್ಲಿರುವ ಶ್ರೀ ವಿರೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ | 17.00 | 17.00 | 9.26 | 0.00 | 17.00 | 0.00 | 17.00 | 0.00 |
| 3 | | ಹುನಗುಂದ | ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕು, ಸೂಳೇಬಾವಿ ಗ್ರಾಮದಲ್ಲಿರುವ ಶ್ರೀ ವೀರಭದ್ರೇಶ್ವರದೇವಾಲಯದ ಸಂರಕ್ಷಣಾ ಕಾಮಗಾರಿ. | 112.00 | 93.94 | 0.00 | 0.00 | 30.00 | 0.00 | 38.00 | 84.64 |
| 4 | | ಹುನಗುಂದ | ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕು, ಸೂಳೇಬಾವಿ ಗ್ರಾಮದಲ್ಲಿರುವ ಶ್ರೀ ಕಾಲೇಶ್ವರ ದೇವಾಲಯದ ಮೇಲ್ಛಾವಣಿ ದುರಸ್ತಿ ಮತ್ತು ಚೈನ್ ಲಿಂಕ್ ಅಳವಡಿಸುವ ಕಾಮಗಾರಿ. | 40.00 | 35.60 | 0.00 | 0.00 | 0.00 | 0.00 | 13.50 | 31.77 |
| 5 | ವಿಜಯಪುರ | ಇಂಡಿ | ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕು ಹೊಸನಗರ ಹಿರೇಮಸಳಿಯಲ್ಲಿರುವ ರಬ್ಬವ್ವಗುಡಿ ದೇವಾಲಯದ ಸಂರಕ್ಷಣಾ ಕಾಮಗಾರಿ. | 25.00 | 24.92 | 8.33 | 10.42 | 10.00 | 14.50 | 0.00 | 0.00 |
| 6 | | ಬಿಜಾಪುರ | ಬಿಜಾಪುರ ಜಿಲ್ಲೆ, ಬಿಜಾಪುರ ತಾಲ್ಲೂಕು ಬಿಜ್ಜರಗಿಯಲ್ಲಿರುವ ಶ್ರೀ ಮಹಾದೇವರ ಗುಡಿ ದೇವಾಲಯದ ಸಂರಕ್ಷಣಾ ಕಾಮಗಾರಿ | 98.75 | 98.77 | 25.00 | 26.73 | 20.00 | 56.62 | 15.72 | 13.69 |
| 7 | | ಚಡಚಣ | ಬಿಜಾಪುರ ಜಿಲ್ಲೆ, ಚಡಚಣ ತಾಲ್ಲೂಕು ಚಡಚಣದಲ್ಲಿರುವ ಶ್ರೀ ಸಂಗಮೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ. | 100.00 | 91.31 | 30.00 | 38.43 | 15.00 | 25.64 | 7.20 | 7.00 |
| 8 | | ತಿಕೋಟಾ | ವಿಜಯಪುರ ಜಿಲ್ಲೆಯ ಶ್ರೀ ದುರ್ಗಾದೇವಿ ದೇವಸ್ಥಾನದ ಅಭಿವೃದ್ಧಿ ಕಾಮಗಾರಿ. | 100.00 | 100.00 | 0.00 | 0.00 | 40.00 | 0.00 | 33.00 | 81.96 |
| 9 | | ಮುದ್ದೇಬಿಹಾಳ | ವಿಜಯಪುರ ಜಿಲ್ಲೆ, ಮುದ್ದೇಬಿಹಾಳ ತಾಲ್ಲೂಕು ಹಂಡರಗಲ್ಲಿನಲ್ಲಿರುವ ಶ್ರೀ ಸಂಗಮೇಶ್ವರ (ತ್ರಿಕೂಟೇಶ್ವರ) ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿ | 50.00 | 50.00 | 0.00 | 0.00 | 0.00 | 0.00 | 17.00 | 0.00 |
| 10 | | ಬಸವನಬಾಗೇವಾಡಿ | ವಿಜಯಪುರ ಜಿಲ್ಲೆ, ಬಸವನಬಾಗೇವಾಡಿ ತಾಲ್ಲೂಕಿನ ಮುತ್ತಗಿ ಗ್ರಾಮದ ಶ್ರೀ ಗೌರಿಶಂಕರ ದೇವಸ್ಥಾನದ ಸಂರಕ್ಷಣೆ ಹಾಗೂ ಅಭಿವೃದ್ಧಿ ಕಾಮಗಾರಿ. | 10.00 | 8.90 | 0.00 | 0.00 | 0.00 | 0.00 | 3.50 | 0.00 |
| 11 | | ಬಸವನಬಾಗೇವಾಡಿ | ವಿಜಯಪುರ ಜಿಲ್ಲೆ, ಬಸವನಬಾಗೇವಾಡಿ ತಾಲ್ಲೂಕಿನ ಮುತ್ತಗಿ ಗ್ರಾಮದ ಶ್ರೀ ಮುಕ್ತೇಶ್ವರ ದೇವಸ್ಥಾನದ ಸಂರಕ್ಷಣೆ ಹಾಗೂ ಅಭಿವೃದ್ಧಿ ಕಾಮಗಾರಿ. | 10.00 | 8.43 | 0.00 | 0.00 | 0.00 | 0.00 | 3.50 | 9.87 |
| 12 | | ಬಸವನಬಾಗೇವಾಡಿ | ವಿಜಯಪುರ ಜಿಲ್ಲೆ, ಬಸವನಬಾಗೇವಾಡಿ ತಾಲ್ಲೂಕಿನ ಮುತ್ತಗಿ ಗ್ರಾಮದ ಶ್ರೀ ಹನುಮಾನ್ ದೇವಸ್ಥಾನದ ಸಂರಕ್ಷಣೆ ಹಾಗೂ ಅಭಿವೃದ್ಧಿ ಕಾಮಗಾರಿ. | 10.00 | 8.02 | 0.00 | 0.00 | 0.00 | 0.00 | 3.50 | 9.46 |
| | | | ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ (379) | | | | | | | | |
| 13 | | ವಿಜಯಪುರ | ಬೀದರ್ ಹಾಗೂ ವಿಜಯಪುರದಲ್ಲಿ ಕರೇಜ್ ಎಂದು ಪ್ರಸಿದ್ಧವಾಗಿರುವ ಪುರಾತನ ನೀರು ಸರಬರಾಜು ವ್ಯವಸ್ಥೆಯನ್ನು ನುರಿತ ಸಂಸ್ಥೆಗಳ ತಾಂತ್ರಿಕ ನೆರವಿನೊಂದಿಗೆ 15 ಕೋಟಿ ರೂ ವೆಚ್ಚದಲ್ಲಿ ಪುನಶ್ಚೇತನಗೊಳಿಸಲಾಗುವುದು. | 1500.00 | | 0.00 | 0.00 | 0.00 | 0.00 | 200.00 | 0.00 |
| | | | ಒಟ್ಟು | 2208.23 | 672.45 | 97.59 | 104.77 | 162.00 | 127.90 | 421.92 | 310.76 |

Commissioner
Archaeology Museums And Heritage, Mysuru-570010

Scanned with OKEN Scanner